# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 04-01-2013.

## ಸುತ್ತೋಲೆ

**ವಿಷಯ: ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನಧಿಕೃತ ಆಸ್ತಿಗಳ ನೋಂದಣಿ ನಿಯಂತ್ರಿಸುವ ಬಗ್ಗೆ.**

**ಉಲ್ಲೇಖ:**

1. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 12278/2007 ರಲ್ಲಿ ನೀಡಿರುವ ಆದೇಶ ದಿನಾಂಕ: 07-07-2012.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 15 ಬಿಪಿಸಿ 92, ದಿನಾಂಕ: 16-11-1992.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 380 ಗ್ರಾಪಂಅ 2002, ದಿನಾಂಕ: 24-05-2003.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 174 ಮುನೋಮು 2005, ದಿನಾಂಕ: 23-08-2005.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 344 ಮುನೋಮು 2008, ದಿನಾಂಕ: 06-04-2009.
6. ಸರ್ಕಾರದ ಆದೇಶ ಸಂಖ್ಯೆ: ವಇ 55 ಹೆಚ್‌ಎಸ್ 2011, ದಿನಾಂಕ: 30-01-2012.
7. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012, ದಿನಾಂಕ: 28-12-2012.
8. ದಿನಾಂಕ: 04-12-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
9. ದಿನಾಂಕ: 19-12-2012 ರಂದು ತಾಂತ್ರಿಕ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಾಗಾರದ ನಡವಳಿ.
10. ಅಧ್ಯಕ್ಷರು, ತಾಂತ್ರಿಕ ಸಮಿತಿ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಡಿಪಿಇ 523 ಪಿಆರ್‌ಎಸ್ 2012, ದಿನಾಂಕ: 20-12-2012 ಮತ್ತು ಅ.ಸ.ಪ. ಸಂಖ್ಯೆ: ಡಿಪಿಇ 419 ಪಿಆರ್‌ಎಸ್ 2012, ದಿನಾಂಕ: 29-12-2012.

-----

ಉಲ್ಲೇಖ (1) ರಲ್ಲಿನ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಪರಿವರ್ತನೆ ಆದೇಶ ಇಲ್ಲದ ಮತ್ತು ಬಡಾವಣೆ ನಕ್ಷೆ ಅನುಮೋದನೆ ಇಲ್ಲದ ಆಸ್ತಿಗಳ ಕಾನೂನುಬಾಹಿರ ನೋಂದಣಿಯನ್ನು ತಡೆಹಿಡಿಯುವ ಸಲುವಾಗಿ ಒಂದು ವ್ಯವಸ್ಥೆಯನ್ನು ರೂಪಿಸುವಂತೆ ಹಾಗೂ ಅನಧಿಕೃತ ಆಸ್ತಿಗಳ ನೋಂದಣಿಯನ್ನು ಕೂಡಲೇ ನಿಲ್ಲಿಸುವಂತೆ ಆದೇಶಿಸಿರುತ್ತದೆ.

4/1/13

2. ಈ ಆದೇಶದ ಪಾಲನೆಯನ್ನು ಮಾಸಿಕ ವಿಚಾರಣೆಗಳ ಮುಖಾಂತರ ಮಾನ್ಯ ಉಚ್ಛನ್ಯಾಯಾಲಯವು ಮೇಲುಸ್ತುವಾರಿ (Monitor) ಮಾಡುತ್ತಿದೆ. ಇದಲ್ಲದೆ ಅನಧಿಕೃತ ಆಸ್ತಿ ನೋಂದಣಿ ಆಗದಿರುವಂತೆ ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಮಾಹಿತಿ ತಂತ್ರಜ್ಞಾನದ ಮುಖಾಂತರ ತಂತ್ರಾಂಶ ಅಭಿವೃದ್ಧಿ ಪಡಿಸುವಂತೆ ಸಹ ಮಾನ್ಯ ನ್ಯಾಯಾಲಯವು ಆದೇಶಿಸಿದೆ. ಅದರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಉಲ್ಲೇಖ (8) ರಂತೆ ದಿನಾಂಕ: 04-12-2012 ರಂದು ನಡೆದ ಸಭೆಯ ನಡವಳಿಯಂತೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ ಮತ್ತು ನೀತಿ ರೂಪಿಸಲು ಶ್ರೀ ರಾಜೀವ್ ಚಾವ್ಲಾ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಒಂದು ತಾಂತ್ರಿಕ ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿತ್ತು. ಅದರಂತೆ ದಿನಾಂಕ: 10-12-2012 ರ ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ.

3. ಈ ಹಿನ್ನೆಲೆಯಲ್ಲಿ, ಪೈಲಟ್ ಪ್ರಾಜೆಕ್ಟ್‌ಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದ ಆಯ್ದ 20 ಗ್ರಾಮ ಪಂಚಾಯಿತಿಗಳಲ್ಲಿ ಆನ್-ಲೈನ್ ವ್ಯವಸ್ಥೆ ಮೂಲಕ ನಮೂನೆ-9 ಮತ್ತು 11 ನ್ನು ನೀಡಲು ತಂತ್ರಾಂಶ ಅಭಿವೃದ್ಧಿಪಡಿಸಲು ಉದ್ದೇಶಿಸಿ ತಾಂತ್ರಿಕ ಸಮಿತಿಯ ಅಧ್ಯಕ್ಷರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ದಿನಾಂಕ: 19-12-2012 ರಂದು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಉಪ ಕಾರ್ಯದರ್ಶಿಗಳಿಗೆ ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ತದನಂತರ ತಾಂತ್ರಿಕ ಸಮಿತಿಯ ಅಧ್ಯಕ್ಷರು ದಿನಾಂಕ: 31-12-2012 ಮತ್ತು 01-01-2013 ರಂದು ಮೇಲ್ಕಂಡ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಉಪ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಸದರಿ ಗ್ರಾಮ ಪಂಚಾಯಿತಿಗಳಲ್ಲಿ ದಾಖಲಾಗಿರುವ ಅನಧಿಕೃತ ಆಸ್ತಿಗಳ ವಿವರಗಳನ್ನು ಪರಿಶೀಲಿಸಿರುತ್ತಾರೆ. ಆ ಸಂದರ್ಭದಲ್ಲಿ ಹಲವಾರು ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿಯಿಂದ ನಮೂನೆ-9 ಮತ್ತು 11 ನ್ನು ಪಡೆಯದೆ ನಕಲಿ ನಮೂನೆ-9 ಮತ್ತು 11 ನ್ನು ಉಪನೋಂದಾಣಾಧಿಕಾರಿಯವರಿಗೆ ಸಲ್ಲಿಸಿ ಆಸ್ತಿ ನೋಂದಣಿ ಮಾಡಿರುವುದು ಕಂಡು ಬಂದಿರುತ್ತದೆ. ಇದಲ್ಲದೆ ವಿವಿಧ ಪ್ರಕರಣಗಳಲ್ಲಿ ಸ್ಪಷ್ಟ ಸೂಚನೆಗಳು ಇದ್ದರೂ ಸಹ ಬಡಾವಣೆ ನಕ್ಷೆ ಅನುಮೋದನೆ ಗ್ರಾಮ ಪಂಚಾಯಿತಿ ಹಂತದಲ್ಲಿ ನಡೆಯುತ್ತಿರುವುದು ಕಂಡು ಬಂದಿದ್ದು, ಈ ಸಂಬಂಧ ಉಲ್ಲೇಖ (7) ರ ಸುತ್ತೋಲೆಯನ್ನು ಮತ್ತೊಮ್ಮೆ ಪುನರುಚ್ಛರಿಸುತ್ತಾ ಎಲ್ಲಾ ಪ್ರಕರಣಗಳಲ್ಲಿಯೂ ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಯಂತೆ ಕ್ರಮ ವಹಿಸುವಂತೆ ಸೂಚಿಸಿದೆ.

4. ಆನ್-ಲೈನ್ ತಂತ್ರಾಂಶ ಅಭಿವೃದ್ಧಿ ಕಾರ್ಯವು ಸುಮಾರು 2 ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಬಹುದಾಗಿದ್ದು, ಈ ಮಧ್ಯೆ ಈ ಎರಡು ತಿಂಗಳ ಸಮಯದಲ್ಲಿಯೂ ಸಹ ಅನಧಿಕೃತ ಆಸ್ತಿಗಳ ನೋಂದಣಿ ಆಗದಿರುವಂತೆ ನೋಡಿ ಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ.

5. ಈ ಸಂಬಂಧ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದರೂ ಸಹ, ಗ್ರಾಮ ಪಂಚಾಯಿತಿಗಳು ಸದರಿ ನಿರ್ದೇಶನಗಳನ್ನು ಪಾಲಿಸದಿರುವುದು ಕಂಡು ಬಂದಿರುತ್ತದೆ.

4/1/13

6. ಉಲ್ಲೇಖ (5) ರ ಕಂದಾಯ ಇಲಾಖೆಯ ಸುತ್ತೋಲೆಯಂತೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ಗ್ರಾಮ ಪಂಚಾಯತಿಯು ನೀಡುವ ನಮೂನೆ 9 ಮತ್ತು ನಮೂನೆ 11ನ್ನು ಆಧರಿಸಿ ಉಪನೋಂದಣಾಧಿಕಾರಿಯವರು ನೋಂದಣಿ ಮಾಡುತ್ತಿರುವುದು ಕಂಡು ಬರುತ್ತದೆ. ಆದುದರಿಂದ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳು ನಮೂನೆ 9 ಮತ್ತು ನಮೂನೆ 11 ನ್ನು ನೀಡುವ ಸಂಬಂಧ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವಿಧಾನವನ್ನು ಅನುಸರಿಸತಕ್ಕದ್ದೆಂದು ಈ ಮೂಲಕ ಸೂಚಿಸಿದೆ.

(ಅ)ಯಾವುದೇ ನಾಗರೀಕನು ತನ್ನ ಆಸ್ತಿಗಾಗಿ ನಮೂನೆ 9 ಅಥವಾ ನಮೂನೆ 11 ನ್ನು ಕೇಳಿದಾಗ ಸದರಿ ಆಸ್ತಿಯು ಅಧಿಕೃತವಾದದ್ದೇ ಅಥವಾ ಅಲ್ಲವೇ ಎಂಬುದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಪರಿಶೀಲಿಸುವುದು. ಈ ಸಂಬಂಧ ಈಗಾಗಲೇ ಉಲ್ಲೇಖ (2) (3) (6) ಮತ್ತು (7) ರ ಸುತ್ತೋಲೆ/ಆದೇಶಗಳಲ್ಲಿ ತಿಳಿಸಿರುವಂತೆ ಈ ಕೆಳಗೆ ನಮೂದಿಸಿರುವ ಆಸ್ತಿಗಳು ಅಧಿಕೃತ ಆಸ್ತಿಗಳಾಗಿರುತ್ತವೆ.

(i) ಮೂಲ/ಹಳೆಯ ಗ್ರಾಮ ಠಾಣಾ ವ್ಯಾಪ್ತಿಯ ಒಳಗಿರುವ ಆಸ್ತಿ/ನಿವೇಶನ. (ತಹಶೀಲ್ದಾರ್ ರವರು ನೀಡುವ Rough Sketch ನಂತೆ- ಉಲ್ಲೇಖ (4) ರ ಸುತ್ತೋಲೆಯಂತೆ)

(ii) ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಚ್‌ಡಿ 55 ಹೆಚ್‌ಎಎಸ್ 2011 ದಿನಾಂಕ: 30-01-2012 ರಂತೆ ಸೃಜಿಸುವ ಆಸ್ತಿ.

(iii) ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗಾರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿ.

7. ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದ್ದಲ್ಲಿ ಅಂತಹ ಆಸ್ತಿಗೆ ನೀಡುವ ಪ್ರಮಾಣ ಪತ್ರದಲ್ಲಿ ಸದರಿ ಆಸ್ತಿಯು ಗ್ರಾಮಠಾಣಾ ವ್ಯಾಪ್ತಿಯಲ್ಲಿ ಹಾಲಿ ಇರುವ ಆಸ್ತಿಯೆಂದು ಸ್ಪಷ್ಟವಾಗಿ ನಮೂದಿಸಿರಬೇಕು. ಹಲವಾರು ಗ್ರಾಮ ಪಂಚಾಯತಿಗಳು ಗ್ರಾಮಗಳ ಗ್ರಾಮಠಾಣಾ ನಕಾಶೆ (Spatial-map) ಹೊಂದಿಲ್ಲದಿರುವುದರಿಂದ ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡು ಹಿಡಿಯಲು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಕಷ್ಟಸಾಧ್ಯವಾಗುತ್ತದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ಗ್ರಾಮ ಠಾಣಾ ಪ್ರದೇಶದ ಸರ್ವೆ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಕಂದಾಯ ಇಲಾಖೆಗೆ ಸಂಬಂಧಿಸಿರುತ್ತದೆ. ಅದರಂತೆ ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಇದೆಯೇ ಎಂದು ಸ್ಥಳ ತನಿಖೆ ಮಾಡಿಸಿ ವರದಿ ನೀಡುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ತಹಶೀಲ್ದಾರರನ್ನು ಕೋರಬೇಕಾಗುತ್ತದೆ. ತಹಶೀಲ್ದಾರರು ಗ್ರಾಮ ಠಾಣಾದೊಳಗೆ ಸದರಿ ಆಸ್ತಿಯ ಸ್ಥಳವನ್ನು ಗುರುತಿಸುವ Rough Sketch ತಯಾರಿಸಿ

4/1/13

ಆಸ್ತಿಯ ಸರಹದ್ದುಗಳ ವಿವರಗಳನ್ನು ಸಹ ನೀಡಬೇಕಾಗುತ್ತದೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಇಂತಹ ಸರ್ವೆ ಮಾಡಿಕೊಡಲು ಕೋರಿದಾಗ ಅವರ ಕೋರಿಕೆಯಂತೆ ಕ್ರಮ ವಹಿಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡುವಂತೆ ಕಂದಾಯ ಇಲಾಖೆಯನ್ನು ಕೋರುವಂತೆ ಅನಧಿಕೃತ ಆಸ್ತಿಗಳ ನಿಯಂತ್ರಣ ಕಾರ್ಯಕ್ಕಾಗಿ ನೋಡಲ್ ಇಲಾಖೆಯಾಗಿರುವ ನಗರಾಭಿವೃದ್ಧಿ ಇಲಾಖೆಯನ್ನು ಪ್ರತ್ಯೇಕವಾಗಿ ಕೋರಲಾಗುತ್ತಿದೆ. ಈ ಸಂಬಂಧ ಉಲ್ಲೇಖ (4) ರಲ್ಲಿನ ಸುತ್ತೋಲೆಯಲ್ಲಿನ ಸೂಚನೆಗಳನ್ನು ಸಹ ಪಾಲಿಸುವುದು.

8. ಉಲ್ಲೇಖ (6) ರ ಸರ್ಕಾರದ ಆದೇಶದಂತೆ, ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ಆಸ್ತಿ ಸೃಜನೆಯಾಗಿದ್ದಲ್ಲಿ ನಮೂನೆ 9 ನ್ನು ನೀಡುವಾಗ ಜೊತೆಯಲ್ಲಿ ಆದೇಶದ ವಿವರ, ಆದೇಶ ಹೊರಡಿಸಿದ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ ಮತ್ತು ದಿನಾಂಕ ನಮೂದಿಸಿ ಹೆಚ್ಚುವರಿ ಪ್ರಮಾಣ ಪತ್ರ ನೀಡುವುದು.

9. ಕೃಷಿ ಭೂಮಿ, ಕೃಷಿಯೇತರ ಭೂಮಿಯಾಗಿ ಪರಿವರ್ತನೆಯಾದ ನಂತರ, ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯಾಗಿ ನಿವೇಶನಗಳನ್ನು ಸಕ್ಷಮ ಪ್ರಾಧಿಕಾರದಿಂದ ಬಿಡುಗಡೆಗೊಳಿಸಿದ ನಂತರ ಸದರಿ ದಸ್ತಾವೇಜುಗಳ ಮೂಲ ಪ್ರತಿ ಹಾಜರುಪಡಿಸಿದ ನಂತರ ಗ್ರಾಮ ಪಂಚಾಯಿತಿಯು ಮೂಲ ದಾಖಲಾತಿಗಳನ್ನು ಅಂದರೆ ಭೂ ಪರಿವರ್ತನೆ ಆದೇಶ ಮತ್ತು ಬಡಾವಣೆ ನಕ್ಷೆ/ವಿನ್ಯಾಸಗಳಿಗೆ ತಾಳೆ ನೋಡಿ, ಸರಿಯಿದ್ದಲ್ಲಿ ಅಂತಹ ನಿವೇಶನಗಳಿಗೆ ಸಂಬಂಧಿಸಿದಂತೆ ಮಾತ್ರ ನಮೂನೆ-9 ಮತ್ತು ನಮೂನೆ-11 ನ್ನು ನೀಡತಕ್ಕದ್ದು.

10. ಆಸ್ತಿಯು, ಉಲ್ಲೇಖಿತ ಸುತ್ತೋಲೆಗಳಲ್ಲಿ ತಿಳಿಸಿರುವಂತೆ ಮತ್ತು ಮೇಲೆ ವಿವರಿಸಿದಂತೆ ಅಧಿಕೃತವಾದದ್ದೆಂದು ಕಂಡು ಬಂದಲ್ಲಿ ಮಾತ್ರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ನ್ನು ನೀಡುವುದು ಮತ್ತು ಜೊತೆಗೆ ಭೂಪರಿವರ್ತನೆ ಆದೇಶದ ವಿವರ, ಆದೇಶ ನೀಡಿದ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ, ದಿನಾಂಕದ ವಿವರ ಮತ್ತು ಬಡಾವಣೆ ನಕ್ಷೆ ಅನುಮೋದನೆ ವಿವರ ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರದ ಹೆಸರು, ಆದೇಶದ ಸಂಖ್ಯೆ ಮತ್ತು ದಿನಾಂಕ ಇತ್ಯಾದಿಗಳೊಂದಿಗೆ ನಮೂದಿಸಿ ಪ್ರಮಾಣ ಪತ್ರವನ್ನು ಸಹ ನೀಡುವುದು. ಈ ಪ್ರಮಾಣ ಪತ್ರದಲ್ಲಿ **ನಮೂನೆ 9 ರ ಸಂಗಡ ನೀಡಬೇಕಾದ ಪ್ರಮಾಣ ಪತ್ರದ ನಮೂನೆಯನ್ನು ಈ ಸುತ್ತೋಲೆಯ ಅನುಬಂಧ 1 ರಲ್ಲಿ ಲಗತ್ತಿಸಿದೆ.** ನಮೂನೆ-9 ರಲ್ಲಿ ನೀಡಬೇಕಾದ ಪ್ರಮಾಣ ಪತ್ರದ ನಮೂನೆಯನ್ನು ಅರ್ಜಿದಾರನಿಗೆ, ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಂಬಂಧಿಸಿದ ಉಪ ನೋಂದಣಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯ ರವಾನೆ ಪುಸ್ತಕದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

11. ಆಸ್ತಿಯು ಅನಧಿಕೃತವೆಂದು ಕಂಡು ಬಂದಲ್ಲಿ (ಅಂದರೆ ಮೇಲೆ ನಮೂದಿಸಿದ ಮೂರು ವಿಧದ ಆಸ್ತಿಗಳ ಪೈಕಿ ಯಾವೊಂದು ವಿಧಕ್ಕೂ ಸೇರಿಲ್ಲದಿದ್ದಲ್ಲಿ) ನಮೂನೆ 9 ನ್ನು ನೀಡತಕ್ಕದ್ದಲ್ಲ ಮತ್ತು ಇಂತಹ ಜಮೀನಿನಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಗ್ರಾಮ ಪಂಚಾಯಿತಿಯಿಂದ ನಾಗರೀಕ ಸೌಲಭ್ಯ ನೀಡುತ್ತಿದ್ದಲ್ಲಿ ಮಾತ್ರ ಕೇವಲ ನಮೂನೆ 11ನ್ನು ಮಾತ್ರ ನೀಡತಕ್ಕದ್ದು. **ನಮೂನೆಯ ಮೇಲೆ "ಈ ಕಂದಾಯ ಸ್ವೀಕೃತಿಯು ಈ ಆಸ್ತಿಯ ಮೇಲೆ ತೆರಿಗೆ ಪಾವತಿದಾರರಿಗೆ ಯಾವುದೇ ರೀತಿಯ ಮಾಲೀಕತ್ವದ ಹಕ್ಕನ್ನು ದೃಢೀಕರಿಸುವುದಿಲ್ಲ."** ಎಂಬ ಮೊಹರನ್ನು ಹಾಕತಕ್ಕದ್ದು. ಈ ಸಂಬಂಧ ಉಲ್ಲೇಖ (3) ರ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನೂ ಸಹ ಪಾಲಿಸುವುದು.

4/1/13

12. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ರಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಅಧಿನಿಯಮದ ಪ್ರಕರಣ 199ಕ್ಕನುಗುಣವಾಗಿ ಭೂಮಿ ಮತ್ತು ಕಟ್ಟಡಗಳಿಗೆ ತೆರಿಗೆ ಬೇಡಿಕೆಯನ್ನು ನಿರ್ಧರಿಸುವ ಉದ್ದೇಶದಿಂದಾಗಿ ನಮೂನೆ 9 ರಲ್ಲಿ ತೆರಿಗೆ ನಿರ್ಧರಣೆ ಪಟ್ಟಿಯನ್ನು ಸಿದ್ಧಗೊಳಿಸಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಇಟ್ಟಿರತಕ್ಕದ್ದೆಂದೂ ಮತ್ತು ನಿಯಮ 30 ರಲ್ಲಿ ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್‌ನ್ನು ತೆರಿಗೆ ನಿರ್ಧರಣೆ ಪಟ್ಟಿ ಆಧಾರದ ಮೇಲೆ ಸಿದ್ಧಗೊಳಿಸಬೇಕು ಎಂದು ತಿಳಿಸಿದ್ದರೂ, ಸಹ ಹಲವಾರು ಗ್ರಾಮ ಪಂಚಾಯಿತಿಗಳು ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ-9) ಮತ್ತು ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ-11) ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳು ತಪ್ಪದೆ ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ-9) ಮತ್ತು ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ-11) ಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಿದೆ.

13. ನೋಂದಣಿಯಾದ ಆಸ್ತಿಗಳಿಗೆ ಸಂಬಂಧಿಸಿದಂತೆ ಉಪನೋಂದಾಣಾಧಿಕಾರಿಯವರು ಗ್ರಾಮ ಪಂಚಾಯಿತಿಗೆ ನೀಡುವ J-Slip ಅನ್ನು ಪರಿಶೀಲಿಸಿ ಸದರಿ ಆಸ್ತಿಯನ್ನು ಅಧಿಕೃತವಾಗಿ ಗ್ರಾಮ ಪಂಚಾಯಿತಿಯಿಂದ ನೀಡಿರುವ ನಮೂನೆ-9 ಮತ್ತು 11 ನ್ನು ಆಧರಿಸಿ ನೋಂದಣಿ ಮಾಡಲಾಗಿದೆಯೇ ಎಂಬುದನ್ನು ದೃಢೀಕರಿಸಿಕೊಳ್ಳುವುದು. ಒಂದು ವೇಳೆ ಸದರಿ ಆಸ್ತಿಯನ್ನು ನಕಲಿ ನಮೂನೆ 9 ಮತ್ತು 11 ನ್ನು ಬಳಸಿ ನೋಂದಣಿ ಮಾಡಿದ್ದಲ್ಲಿ ಅದನ್ನು ಕೂಡಲೇ ಸಂಬಂಧಪಟ್ಟ ಉಪನೋಂದಾಣಾಧಿಕಾರಿಯವರ ಗಮನಕ್ಕೆ ತರುವುದು. ಇಂತಹ ಪ್ರಕರಣಗಳಲ್ಲಿ ಯಾವ ರೀತಿಯ ಕ್ರಮ ವಹಿಸಬೇಕು ಎಂಬ ಬಗ್ಗೆ ಉಪನೋಂದಣಾಧಿಕಾರಿಯವರಿಗೆ ಸೂಚನೆ ನೀಡಲು ಕಂದಾಯ ಇಲಾಖೆಯನ್ನು ಕೋರಲಾಗುತ್ತಿದ್ದು, ಈ ಸಂಬಂಧ ಕಂದಾಯ ಇಲಾಖೆಯಿಂದ ಸ್ಪಷ್ಟೀಕರಣ/ಮಾಹಿತಿ ಸ್ವೀಕೃತವಾದ ನಂತರ ತಿಳಿಸಲಾಗುವುದು.

14. ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಹಾಗೂ ಉಲ್ಲೇಖಿತ ಸುತ್ತೋಲೆಗಳಲ್ಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತೊಮ್ಮೆ ಸೂಚಿಸುತ್ತಾ, ಇದರಲ್ಲಿ ಯಾವುದೇ ಲೋಪ ಉಂಟಾದಲ್ಲಿ ಅವರುಗಳನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದೆ.

04/01/2013

(ಪಿ.ಕುಮಾರ್)
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

೧) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,

೨) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.

ಇ) ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಮುಖಾಂತರ.

ಈ) ಸಂಪಾದಕರು ಕರ್ನಾಟಕ ವಿಕಾಸ ಪತ್ರಿಕೆ/ವೆಬ್ ಸೈಟ್, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.

ಉ) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ತಾಂತ್ರಿಕ ಸಮಿತಿಯ ಅಧ್ಯಕ್ಷರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು.
5) ಮಹಾಪರಿವೀಕ್ಷಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು.

## ಅನುಬಂಧ-1

### ನಮೂನೆ 9 ಕ್ಕೆ (ಅಧಿಕೃತ ಆಸ್ತಿ) ಲಗತ್ತುಗಳು.

- **ಆಸ್ತಿಯ ವಿಧ (ಅನ್ವಯಿಸುವುದನ್ನು ಗುರುತುಮಾಡಿ)**

1. ಮೂಲ / ಹಳೆಯ ಗ್ರಾಮ ಠಾಣಾ ವ್ಯಾಪ್ತಿ.
2. ವಸತಿ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಚ್‌ಡಿ 55 ಹೆಚ್‌ಎಎಸ್ 2011 ದಿನಾಂಕ: 30-01-2012 ರಂತೆ ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯ ಮನೆಗಳು.
3. ಭೂಪರಿವರ್ತನೆ ಆದೇಶ ಮತ್ತು ಸಕ್ಷಮ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಅನುಮೋದಿತ ಆಸ್ತಿ.

- **ಆಸ್ತಿಯ ವಿಧ(1) ಆಗಿದ್ದಲ್ಲಿ**
- ಆಸ್ತಿಯು ಹಳೆಯ ಗ್ರಾಮ ಠಾಣಾದ ಭಾಗವಾಗಿರುವುದಾಗಿ ನಮೂದಿಸಿ ತಹಶೀಲ್ದಾರರು ನೀಡಿದ ಆದೇಶ ಸಂಖ್ಯೆ------------------ಮತ್ತು ದಿನಾಂಕ:-------------

- **ಆಸ್ತಿಯ ವಿಧ (2) ಆಗಿದ್ದಲ್ಲಿ**
- ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯ ಮಂಜೂರಾತಿ ಆದೇಶ ಸಂಖ್ಯೆ---------------------- ದಿನಾಂಕ------------ ಮತ್ತು ಆದೇಶ ನೀಡಿದ ಪ್ರಾಧಿಕಾರದ ಹೆಸರು----------

- **ಆಸ್ತಿಯ ವಿಧ (3) ಆಗಿದ್ದಲ್ಲಿ**
- ಭೂಪರಿವರ್ತನೆ ಆದೇಶ ಸಂಖ್ಯೆ--------------- ದಿನಾಂಕ--------------- ಮತ್ತು ಆದೇಶ ನೀಡಿದ ಪ್ರಾಧಿಕಾರದ ಹೆಸರು----------------------------

- ಬಡಾವಣೆ ನಕ್ಷೆ ಮಂಜೂರಾತಿ ಸಂಖ್ಯೆ-----------------ದಿನಾಂಕ------------ಮತ್ತು ಅನುಮೋದನೆ ನೀಡಿದ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಹೆಸರು -----------------------------------------------------

### ದೃಢೀಕರಣ

ನಮೂನೆ-9 ಹಾಗೂ ಅದಕ್ಕೆ ಸಂಬಂಧಿಸಿದಂತೆ ಅನುಬಂಧ-1 ರಲ್ಲಿನ ಮಾಹಿತಿಗಳು ಅಧಿಕೃತವಾಗಿದ್ದು, ಸದರಿ ಮಾಹಿತಿಯು ಕಛೇರಿ ದಾಖಲಾತಿಗಳಾದ -------- ಸಾಲಿನ ನಮೂನೆ-9 ವಹಿಯಲ್ಲಿನ --------ಪುಟ ಸಂಖ್ಯೆಯ ---- ಕ್ರಮ ಸಂಖ್ಯೆಯಲ್ಲಿ ನಮೂದಾಗಿದ್ದು, -------- ರವರು ದೃಢೀಕರಿಸಿರುತ್ತಾರೆ. ಈ ನಮೂನೆ ನೀಡುವಾಗ ----------- ವರ್ಷದ ವಿತರಣಾ ವಹಿಯ -------- ಪುಟದಲ್ಲಿನ -------- ಕ್ರಮ ಸಂಖ್ಯೆಯಲ್ಲಿ ನಮೂದಾಗಿದೆ.

4/1/13

-------------- ಪಂಚಾಯತಿ ಅಭಿವೃದ್ಧಿ ಅಧಿಕಾರಿ
-------------------- ಗ್ರಾಮ ಪಂಚಾಯತಿ
------------ ತಾಲ್ಲೂಕು
------------ ಜಿಲ್ಲೆ.

ಗೆ:

1. ಅರ್ಜಿದಾರನಿಗೆ.
2. ಸಂಬಂಧಿಸಿದ ಉಪನೋಂದಣಾಧಿಕಾರಿ
3. ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ
4. ಕಛೇರಿ ಪ್ರತಿ.